<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮಂಡ್ಯ</u>

# <u>ಸ್ಪೆಷಲ್ ಕೇಸ್ ನಂಬರ್ಃ **2/2024**</u>

ಪಿರ್ಯಾದುದಾರರುಃ ಅಬಕಾರಿ ಪೊಲೀಸರು ಪಾಂಡವಪುರ ಉಪ ವಿಭಾಗ, ಪಾಂಡವಪುರ

-ವಿರುದ್ಧ-

| | |
|---|---|
| ಆರೋಪಿ-**1** | ನಾಗೇಂದ್ರ |
| ತಂದೆಯ ಹೆಸರು | ರಾಮಚಂದ್ರ |
| ವಯಸ್ಸು | ವರುಷ |
| ಉದ್ಯೋಗ | |
| ವಾಸ ಸ್ಥಳ | ಪಾಲಹಳ್ಳಿ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು. |

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರನ್ವಯ ದಾಖಲಿಸಿಕೊಂಡ ಆರೋಪಿಯ ಹೇಳಿಕೆ</u>

ಪ್ರಶ್ನೆ 1. ನ್ಯಾಯಾಲಯದಲ್ಲಿ ಅಭಿಯೋಜನದ ಪರವಾಗಿ ವಿಚಾರಣೆಗೊಳಪಟ್ಟ ಪ್ರಾ.ಸಾ-1 ರಿಂದ ಪ್ರಾಸಾ-6 ರವರ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿರುವಿರಾ?

ಉತ್ತರ :

ಪ್ರಶ್ನೆ 2. ಪ್ರಾ.ಸಾ-1/ಶ್ರೀಮತಿ.ರಮ್ಯ.ಹೆಚ್.ಡಿ. ರವರು ತಮ್ಮ ಸಾಕ್ಷ್ಯದಲ್ಲಿ ದಿಃ19.04.2023 ರಂದು ನಾನು ಕಛೇರಿಯಲ್ಲಿ ಇದ್ದಾಗ ಮಧ್ಯಾಹ್ನ 12.30 ಗಂಟೆ ಸುಮಾರಿಗೆ ಬಾತ್ಮಿದಾರರಿಂದ ಶ್ರೀರಂಗಪಟ್ಟಣ ತಾಲ್ಲೂಕು ಬೆಳಗೊಳ ಹೋಬಳಿ ಪಾಲಹಳ್ಳಿ ಗ್ರಾಮದ ರಾಜೇಂದ್ರ ಮತ್ತು ಗಿರೀಶ ರವರು ತಮ್ಮ ಮನೆಯ ಹಿಂಭಾಗದಲ್ಲಿ ಇರುವ ಜಮೀನಿನಲ್ಲಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆದಿದ್ದಾರೆ ಎಂದು ಬಂದ ಸುದ್ದಿಯನ್ನು ದಾಖಲಿಸಿ, ವರದಿಯನ್ನು ತಯಾರಿಸಿ ಸದರಿ ವರದಿಯ ಆಧಾರದ ಮೇಲೆ 101/2022-2023 ನೇ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 3. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ನಾನು ಪ್ರಥಮ ವರ್ತಮಾನ ವರದಿಯನ್ನು ಕಳುಹಿಸಿದ ನಂತರ ನನಗೆ ಬಂದ ಸುದ್ದಿಯನ್ನು ಅಬಕಾರಿ DYSP ರವರಿಗೆ ತಿಳಿಸಿ ದಾಳಿ ನಡೆಸಲು ಪರವಾನಗಿ ಪಡೆದ ನಂತರ ನಮ್ಮ ಕಛೇರಿಯಲ್ಲಿ ಇದ್ದ ಸಿಬ್ಬಂದಿಯ ಮೂಲಕ ಕಛೇರಿಯ ಮುಂಭಾಗದಲ್ಲಿ ಹಾಜರಿದ್ದ ಮಧುಸೂದನ ಮತ್ತು ಗಿರೀಶ ರವರಿಗೆ ಪಂಚರಾಗಿ ಕೆಲಸ ಮಾಡುವಂತೆ ನೋಟೀಸು ಕೊಟ್ಟು ಕೇಳಿಕೊಂಡೆನು ಮತ್ತು ಪಂಚರಾಗಿ ಕೆಲಸ ಮಾಡುವಂತೆ ಪಾಲಹಳ್ಳಿ ವೃತ್ತದ ಗ್ರಾಮ ಸಹಾಯಕರಾದ ಬೆಟ್ಟಯ್ಯ ರವರಿಗೆ ನೋಟೀಸು ಕೊಟ್ಟು ಕೇಳಿಕೊಂಡೆನು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 4. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮೇಲೆ ಹೇಳಿದ ಪಂಚರು, ನಮ್ಮ ಕಛೇರಿಯ ಸಿಬ್ಬಂದಿಯ ಜೊತೆಯಲ್ಲಿ ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಪಾಲಹಳ್ಳಿ ಗ್ರಾಮದಲ್ಲಿ ಇರುವ ನಾಗೇಂದ್ರ ಮತ್ತು ಗಿರೀಶ ರವರ ಮಾಲೀಕತ್ವಕ್ಕೆ ಸೇರಿದ ಸ.ನಂ.273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದಲ್ಲಿ ಇರುವ ಜಾಗಕ್ಕೆ ಹೋಗಿ ತನಿಖೆ ಮಾಡಿದಾಗ 23 ಗಾಂಜಾ ಗಿಡಗಳು ಬೆಳೆದಿರುವುದು ಕಾಣಿಸಿತು ಮತ್ತು 2 ಗಿಡಗಳನ್ನು ಕಿತ್ತು ಇಟ್ಟಿರುವುದು ಕಾಣಿಸಿತು ಎಂದೂ ಸ್ಥಳದಲ್ಲಿ ಇದ್ದ ನಾಗೇಂದ್ರ ಮತ್ತು ಗಿರೀಶ ರವರನ್ನು ವಿಚಾರಿಸಿದಾಗ ಗಾಂಜಾ ಗಿಡಗಳನ್ನು ಬೆಳೆಸಲು ಪರವಾನಗಿ ಇಲ್ಲ ಎಂದು ಹೇಳಿದರು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 5. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಆನಂತರ ನಮ್ಮ ಜೊತೆಯಲ್ಲಿ ಇದ್ದ ಪಂಚರ ಸಮಕ್ಷಮ ಸಿಬ್ಬಂದಿಯ ಮೂಲಕ ಜಮೀನಿನಲ್ಲಿ ಬೆಳೆದಿದ್ದ 23 ಗಾಂಜಾ ಗಿಡಗಳನ್ನು ಕೀಳಿಸಿ ಸ್ಥಳದಲ್ಲಿ ಸಿಕ್ಕಿದ ಮತ್ತು ಕೀಳಿಸಿದ ಗಾಂಜಾ ಗಿಡಗಳನ್ನು ಪಂಚರ ಸಮಕ್ಷಮ ಮಹಜರು ಬರೆದು ವಶಪಡಿಸಿಕೊಂಡು ಸ್ಥಳದಲ್ಲಿ ಸಿಕ್ಕಿದ ನಾಗೇಂದ್ರ ಮತ್ತು ಗಿರೀಶ ರವರನ್ನು ಹಿಡಿದುಕೊಂಡು

ಸಿಬ್ಬಂದಿಯ ಜೊತೆಯಲ್ಲಿ ನಮ್ಮ ಕಛೇರಿಗೆ ವಾಪಸ್ಸು ಬಂದೆನು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 6. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ನಾನು 19.04.2023 ರಂದು ವಶಪಡಿಸಿಕೊಂಡಿದ್ದ ಗಾಂಜಾ ವಸ್ತುಗಳನ್ನು ಇನ್ವೆಂಟರಿ ಮಾಡಿಕೊಡುವಂತೆ 25.05.2023 ರಂದು ಶ್ರೀರಂಗಪಟ್ಟಣ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶರಿಗೆ ವಿನಂತಿ ಪತ್ರ ಕಳುಹಿಸಿದ್ದೇನೆ ಎಂದೂ ನನ್ನ ವಿನಂತಿ ಪ್ರಕಾರ 25.05.2023 ರಂದು ಶ್ರೀರಂಗಪಟ್ಟಣ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶರು ಇನ್ವೆಂಟರಿ ಮಾಡಿ, ಫೋಟೋ ತೆಗೆಸಿ Annexure-I, ಇನ್ವೆಂಟರಿ ಪ್ರಮಾಣ ಪತ್ರಗಳನ್ನು ನನಗೆ ಕಳುಹಿಸಿದ್ದಾರೆ ಮತ್ತು ನ್ಯಾಯಾಧೀಶರು ಇನ್ವೆಂಟರಿ ಮಾಡಿದಾಗ ನಾನು ಮತ್ತು ನನ್ನ ಸಿಬ್ಬಂದಿ ಹಾಜರಿದ್ದೆವು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 7. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ನ್ಯಾಯಾಧೀಶರು ಇನ್ವೆಂಟರಿ ಮಾಡಿದಾಗ ನಾನು ವಶಪಡಿಸಿಕೊಂಡ ವಸ್ತುಗಳ ಒಟ್ಟು ತೂಕ 1300 ಗ್ರಾಂ ಬಂದಿತು, ಸದರಿ 1300 ಗ್ರಾಂ ಗಾಂಜಾ ವಸ್ತುವಿನಲ್ಲಿ FSL ಕಛೇರಿಗೆ ಕಳುಹಿಸಲು 20 ಗ್ರಾಂ ತೂಕದ ವಸ್ತುವನ್ನು ಪ್ರತ್ಯೇಕ ಮಾಡಿ ಬಟ್ಟೆಯ ಗಂಟು ಕಟ್ಟಿ ಸೀಲು ಮಾಡಿ ಉಳಿಕೆ 1280 ಗ್ರಾಂ ತೂಕದ ವಸ್ತುವನ್ನು ಪ್ರತ್ಯೇಕ ಮಾಡಿ ಬಟ್ಟೆಯ ಗಂಟು ಕಟ್ಟಿ ಸೀಲು ಮಾಡಲಾಯಿತು ಎಂದು ಹೇಳಿದ್ದಾರೆ.

ಉತ್ತರ :

ಪ್ರಶ್ನೆ 8. ಪ್ರಾ.ಸಾ-1 ರವರು ತಮ್ಮ ಸಾಕ್ಷ್ಯದಲ್ಲಿ 1280 ಗ್ರಾಂ ತೂಕದ ವಸ್ತುವನ್ನು ತುಂಬಿ ಕಟ್ಟಿದ್ದ ಗಂಟನ್ನು 30.05.2023 ರಂದು ಮಂಡ್ಯ drug disposal committee ಗೆ

ಕೊಟ್ಟು ರಶೀದಿಯನ್ನು ಪಡೆದಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 9. ಪ್ರಾ.ಸಾ-4/ಯೊಗೇಶ.ಎಸ್.ಎನ್ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 19.04.2023 ರಂದು ಶ್ರೀರಂಗಪಟ್ಟಣ ವಲಯದ ಅಬಕಾರಿ ನಿರೀಕ್ಷಕರಾದ ರಮ್ಯಾ ರವರು ನನ್ನನ್ನು, ಪಂಚರಾದ ಮಧುಸೂದನ ಮತ್ತು ಗಿರೀಶ ರವರ ಜೊತೆಯಲ್ಲಿ ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಪಾಲಹಳ್ಳಿ ಗ್ರಾಮದಲ್ಲಿ ಇರುವ ನಾಗೇಂದ್ರ ಮತ್ತು ಗಿರೀಶ ರವರ ಮಾಲೀಕತ್ವಕ್ಕೆ ಸೇರಿದ ಸ.ನಂ.273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದಲ್ಲಿ ಇರುವ ಜಾಗಕ್ಕೆ ಕರೆದುಕೊಂಡು ಹೋದರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 10. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ದಿಃ 19.04.2023 ರಂದು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಪಾಲಹಳ್ಳಿ ಗ್ರಾಮದಲ್ಲಿ ಇರುವ ನಾಗೇಂದ್ರ ಮತ್ತು ಗಿರೀಶ ರವರ ಮಾಲೀಕತ್ವಕ್ಕೆ ಸೇರಿದ ಸ.ನಂ.273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದಲ್ಲಿ ತನಿಖೆ ಮಾಡಿದಾಗ 23 ಗಾಂಜಾ ಗಿಡಗಳು ಬೆಳೆದಿರುವುದು ಕಾಣಿಸಿತು ಮತ್ತು 2 ಗಿಡಗಳನ್ನು ಕಿತ್ತು ಇಟ್ಟಿರುವುದು ಕಾಣಿಸಿತು ಎಂದು ಹೇಳಿದ್ದಾರೆ.

ಪ್ರಶ್ನೆ 11. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ಸ್ಥಳದಲ್ಲಿ ಇದ್ದ ನಾಗೇಂದ್ರ ಮತ್ತು ಗಿರೀಶ ರವರನ್ನು ವಿಚಾರಿಸಿದಾಗ ಗಾಂಜಾ ಗಿಡಗಳನ್ನು ಬೆಳೆಸಲು ಪರವಾನಗಿ ಇಲ್ಲ ಎಂದು ಹೇಳಿದ ನಂತರ ನಮ್ಮ ಜೊತೆಯಲ್ಲಿ ಇದ್ದ ಪಂಚರ ಸಮಕ್ಷಮ ಸಿಬ್ಬಂದಿಯ ಮೂಲಕ ಜಮೀನಿನಲ್ಲಿ ಬೆಳೆದಿದ್ದ 23 ಗಾಂಜಾ ಗಿಡಗಳನ್ನು ರಮ್ಯಾ ರವರು ಕೀಳಿಸಿದರು ಎಂದೂ, ಸ್ಥಳದಲ್ಲಿ ಸಿಕ್ಕಿದ ಮತ್ತು

ಕೀಳಿಸಿದ 25 ಗಾಂಜಾ ಗಿಡಗಳನ್ನು ಪಂಚರ ಸಮಕ್ಷಮ ನಿಪಿ-4 ರಲ್ಲಿ ಗುರುತಿಸಿರುವ ಮಹಜರು ಬರೆದು ರಮ್ಯಾ ರವರು ವಶಪಡಿಸಿಕೊಂಡರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 12. ಪ್ರಾ.ಸಾ-4 ರವರು ತಮ್ಮ ಸಾಕ್ಷ್ಯದಲ್ಲಿ ದಿಃ 19.04.2023 ರಂದು ಮೇಲೆ ವಿವರಿಸಿದ ಜಮೀನಿನಲ್ಲಿ ಸಿಕ್ಕಿದ ಗಾಂಜಾ ಗಿಡಗಳನ್ನು ರಮ್ಯಾ ರವರು ಶ್ರೀರಂಗಪಟ್ಟಣ ನ್ಯಾಯಾಧೀಶರಿಂದ ಇನ್ವಂಟರಿ ಮಾಡಿಸಿದಾಗ ನಾನು ಹಾಜರಿದ್ದೆನು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 13. ಪ್ರಾ.ಸಾ-5/ಬಿ.ಶಿವಣ್ಣ ರವರು ತಮ್ಮ ಸಾಕ್ಷ್ಯದಲ್ಲಿ ನಾನು 05.06.2023 ರಂದು ಈ ಪ್ರಕರಣದ ಕಡತವನ್ನು ಚಾಸಾ-9 ನೇ ಬಿ.ಸಿ.ರಮೇಶ ಪಾಂಡವಪುರ ಉಪ ವಿಭಾಗದ ಅಬಕಾರಿ ನಿರೀಕ್ಷಕರಿಂದ ಪಡೆದುಕೊಂಡು ದಿಃ13.06.2023 ರಂದು 20 ಗ್ರಾಂ ಗಾಂಜಾ ಇದ್ದ ಬಟ್ಟೆಯ ಗಂಟನ್ನು ರಾಸಾಯನಿಕ ಪರೀಕ್ಷೆಗಾಗಿ ಬೆಂಗಳೂರು ಶಾಂತಿನಗರದಲ್ಲಿ ಇರುವ ರಾಸಾಯನಿಕ ಪರೀಕ್ಷಾ ಕೇಂದ್ರುಕ್ಕೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 14. ಪ್ರಾ.ಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ನಾನು 20.06.2023 ರಂದು ಪಾಲಹಳ್ಳಿ ಗ್ರಾಮದ ಸ.ನಂ. 273/1 ನೇ ಜಮೀನಿನ ಮಾಲೀಕರ ಕುರಿತು ಮಾಹಿತಿ ಕಳುಹಿಸುವಂತೆ ಶ್ರೀರಂಗಪಟ್ಟಣ ತಾಲ್ಲೂಕು ತಹಶೀಲ್ದಾರ್ ರವರಿಗೆ ವಿನಂತಿ ಪತ್ರ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 15. ಪ್ರಾ.ಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ನಾನು 11.07.2023 ರಂದು ಮಹಜರು ಸಾಕ್ಷಿದಾರರಾದ ಗಿರೀಶ, ಮಧುಸೂದನ, ಪಾಲಹಳ್ಳಿ ವೃತ್ತದ ಕಂದಾಯ ಸಹಾಯಕರಾದ ಬೆಟ್ಟಯ್ಯ, ನಮ್ಮ ಕಛೇರಿಯ ಪೇದೆಯಾದ ಯೋಗೇಶ ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 16. ಪ್ರಾ.ಸಾ-5 ರವರು ತಮ್ಮ ಸಾಕ್ಷ್ಯದಲ್ಲಿ 24.08.2023 ರಂದು ಬೆಂಗಳೂರು ರಾಸಾಯನಿಕ ಪರೀಕ್ಷಾ ಕೇಂದ್ರದವರು ಕಳುಹಿಸಿದ ವರದಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿದ ವಸ್ತುವಿನ ಜೊತೆಯಲ್ಲಿ ಪಡೆದಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 17. ಪ್ರಾ.ಸಾ-5 ರವರು ತಮ್ಮ ಸಾಕ್ಷ್ಯದಲ್ಲಿ ದಿಃ 16.11.2023 ರಂದು ಶ್ರೀರಂಗಪಟ್ಟಣ ತಹಶೀಲ್ದಾರ್ ರವರು ಕಳುಹಿಸಿದ ಪತ್ರ ಮತ್ತು ಪಾಲಹಳ್ಳಿ ಗ್ರಾಮದ 273/1 ನೇ ಜಮೀನಿನ 2023-24 ನೇ ಸಾಲಿನ RTC ಯನ್ನು ಪಡೆದುಕೊಂಡ ನಂತರ ದಿಃ07.12.2023 ರಂದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 18. ಪ್ರಾ.ಸಾ-6/ಬೆಟ್ಟಯ್ಯ ರವರು ತಮ್ಮ ಸಾಕ್ಷ್ಯದಲ್ಲಿ ದಿಃ 19.04.2023 ರಂದು ಶ್ರೀರಂಗಪಟ್ಟಣ ವಲಯದ ಅಬಕಾರಿ ನಿರೀಕ್ಷಕರಾದ ರಮ್ಯಾ ರವರು ಪಂಚರಾಗಿ ಕೆಲಸ ಮಾಡುವಂತೆ ನನಗೆ ನಿಪಿ-8 ರಲ್ಲಿ ಗುರುತಿಸಿರುವ ನೋಟೀಸನ್ನು ಕೊಟ್ಟ ನಂತರ ನಾನು ಅಬಕಾರಿ ನಿರೀಕ್ಷಕರಾದ ರಮ್ಯಾ ರವರು ಮಧುಸೂದನ ಮತ್ತು ಗಿರೀಶ ರವರ ಜೊತೆಯಲ್ಲಿ ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಪಾಲಹಳ್ಳಿ ಗ್ರಾಮದಲ್ಲಿ ಇರುವ ನಾಗೇಂದ್ರ ಮತ್ತು ಗಿರೀಶ ರವರ ಮಾಲೀಕತ್ವಕ್ಕೆ ಸೇರಿದ

ಸ.ನಂ.273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದಲ್ಲಿ ಇರುವ ಜಾಗಕ್ಕೆ ಕರೆದುಕೊಂಡು ಹೋದರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 19. ಪ್ರಾ.ಸಾ-6 ರವರು ತಮ್ಮ ಸಾಕ್ಷ್ಯದಲ್ಲಿ ದಿಃ 19.04.2023 ರಂದು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಪಾಲಹಳ್ಳಿ ಗ್ರಾಮದಲ್ಲಿ ಇರುವ ನಾಗೇಂದ್ರ ಮತ್ತು ಗಿರೀಶ ರವರ ಮಾಲೀಕತ್ವಕ್ಕೆ ಸೇರಿದ ಸ.ನಂ.273/1 ನೇ ಜಮೀನಿನಲ್ಲಿ ಇರುವ ಮನೆಯ ಹಿಂಭಾಗದಲ್ಲಿ ತನಿಖೆ ಮಾಡಿದಾಗ 23 ಗಾಂಜಾ ಗಿಡಗಳು ಬೆಳೆದಿರುವುದು ಕಾಣಿಸಿತು ಮತ್ತು 2 ಗಿಡಗಳನ್ನು ಕಿತ್ತು ಇಟ್ಟಿರುವುದು ಕಾಣಿಸಿತು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 20. ಪ್ರಾ.ಸಾ-6 ರವರು ತಮ್ಮ ಸಾಕ್ಷ್ಯದಲ್ಲಿ ಸ್ಥಳದಲ್ಲಿ ಇದ್ದ ನಾಗೇಂದ್ರ ಮತ್ತು ಗಿರೀಶ ರವರನ್ನು ವಿಚಾರಿಸಿದಾಗ ಗಾಂಜಾ ಗಿಡಗಳನ್ನು ಬೆಳೆಸಲು ಪರವಾನಗಿ ಇಲ್ಲ ಎಂದು ಹೇಳಿದ ನಂತರ ನಮ್ಮ ಜೊತೆಯಲ್ಲಿ ಇದ್ದ ಪಂಚರ ಸಮಕ್ಷಮ ಸಿಬ್ಬಂದಿಯ ಮೂಲಕ ಜಮೀನಿನಲ್ಲಿ ಬೆಳೆದಿದ್ದ 23 ಗಾಂಜಾ ಗಿಡಗಳನ್ನು ರಮ್ಯಾ ರವರು ಕೀಳಿಸಿದರು ಮತ್ತು ಸ್ಥಳದಲ್ಲಿ ಸಿಕ್ಕಿದ ಮತ್ತು ಕೀಳಿಸಿದ ಗಾಂಜಾ ಗಿಡಗಳನ್ನು ಪಂಚರ ಸಮಕ್ಷಮ ನಿಪಿ-4 ರಲ್ಲಿ ಗುರುತಿಸಿರುವ ಮಹಜರು ಬರೆದು ರಮ್ಯಾ ರವರು ವಶಪಡಿಸಿಕೊಂಡರು ಎಂದು ಹೇಳಿದ್ದಾರೆ.

ಉತ್ತರ

ಪ್ರಶ್ನೆ 21. ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯೇ?

ಉತ್ತರ :

ಪ್ರಶ್ನೆ 22. ಹೇಳುವುದು ಇನ್ನೇನಾದರೂ ಇದೆಯೇ?
ಉತ್ತರ :

(ಮೇಲ್ಕಂಡ ಪ್ರಶ್ನೆಗಳನ್ನು ನಾನೇ ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ, ಹೇಳಿ, ಅವರು ಕೊಟ್ಟ ಉತ್ತರಗಳನ್ನು ನಾನೇ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸುತ್ತೇನೆ)

**(ಸುಬ್ರಮಣ್ಯ. ಜೆ.ಎನ್)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.

ದಿನಾಂಕಃ **16.03.2026.**
ಮಂಡ್ಯ